**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹೊಳಲ್ಕೆರೆ.**

ಸಿ.ಸಿ. ನಂಃ **1027/2024**

ಫಿರ್ಯಾದಿದಾರರುಃ ಸರ್ಕಾರದ ಪರವಾಗಿ –ಚಿಕ್ಕಜಾಜೂರು ಪೋಲೀಸ್ ಠಾಣೆ

- ವಿರುದ್ಧ -

ಆರೋಪಿ ಃ

1. ಚಿತ್ತಪ್ಪ ಬಿನ್ ಲೇಟ್ ಚಿತ್ತಪ್ಪ ,
   ವಯಸ್ಸುಃ 49 ವರ್ಷ,
   ಕೆಎ-16-ಟಿಎ-2884 ಟ್ರಾಕ್ಟರ್ (ಇಂಜಿನ್ ನಂಃ 39.1351/ಎನ್ ಎನ್ 001665 ಎಸ್ ಚಾಸಿಸ್ ನಂಃ ಡಬ್ಲ್ಯೂ ಕ್ಯೂ ಟಿ ಎನ್ 317191 24363) ಮತ್ತು ನಂಬರ್ ಬರೆಸಿರದ ಚಾಸಿಸ್ ನಂಃ ವಿಟಿ/ಸಿಹೆಚ್ 322 ರ ಟ್ರೈಲರ್ ಚಾಲಕ,
   ವಾಸಃ ಅಮೃತಾಪಪುರ ಗ್ರಾಮ, ಹೊಳಲ್ಕೆರೆ ತಾಲ್ಲೂಕು,
   ಚಿತ್ರದುರ್ಗ ಜಿಲ್ಲೆ.
2. ಶ್ರೀಮತಿ ಶಿವಮ್ಮ ಕೋಂ ಪಾತಲಿಂಗಪ್ಪ ,
   ವಯಸ್ಸುಃ 60 ವರ್ಷ,ವೃತ್ತಿಃ ಹೊಲಮನೆ ಕೆಲಸ,
   ಕೆಎ-16-ಟಿಎ-2884 ಟ್ರಾಕ್ಟರ್ (ಇಂಜಿನ್ ನಂಃ 39.1351/ಎನ್ ಎನ್ 001665 ಎಸ್ ಚಾಸಿಸ್ ನಂಃ ಡಬ್ಲ್ಯೂ ಕ್ಯೂ ಟಿ ಎನ್ 317191 24363) ಮತ್ತು ನಂಬರ್ ಬರೆಸಿರದ ಚಾಸಿಸ್ ನಂಃ ವಿಟಿ/ಸಿಹೆಚ್ 322 ರ ಆರ್ ಸಿ. ಮಾಲೀಕರು,
   ವಾಸಃ ಹಳೇಹಳ್ಳಿ ಗೊಲ್ಲರಹಟ್ಟಿ ಗ್ರಾಮ, ಹೊಳಲ್ಕೆರೆ ತಾಲ್ಲೂಕು,
   ಚಿತ್ರದುರ್ಗ ಜಿಲ್ಲೆ.

**:: ಆ ಪಾ ದ ನೆ ::**

ದಿಃ19-02-2024 ರಂದು ಸಂಜೆ ಸುಮಾರು 7-15 ರ ಸಮಯದಲ್ಲಿ 1 ನೇ ಆರೋಪಿತನಾದ ನೀನು ಕೆಎ-16-ಟಿಎ-2884 ಟ್ರಾಕ್ಟರ್ ಮತ್ತು ನಂಬರ್ ಬರೆಸಿರದ ಚಾಸಿಸ್ ನಂಃ ವಿಟಿ/ಸಿಹೆಚ್ 322 ರ ಟ್ರಾಕ್ಟರ್ ಟ್ರೈಲರ್ ನಲ್ಲಿ ಜಲ್ಲಿಕಲ್ಲನ್ನು ತುಂಬಿಕೊಂಡು ಹರೇನಹಳ್ಳಿ ಗ್ರಾಮದ ಕಡೆಯಿಂದ ಮೇಕೇನಹಟ್ಟಿ ಗ್ರಾಮದ ಕಡೆಗೆ ಅತೀವೇಗ ಮತ್ತು ನಿರ್ಲಕ್ಷ್ಯತನದಿಂದ ಮಾನವನ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ

ಚಾಲನೆ ಮಾಡಿಕೊಂಡು ಹೋಗಿ ದಾಸರಹಳ್ಳಿ ಮತ್ತು ಹರೇನಹಳ್ಳಿ ಗ್ರಾಮಗಳ ಮಧ್ಯೆ ಶಿವಕುಮಾರ ಬಿನ್ ಹನುಮಂತಪ್ಪರವರ ಅಡಿಕೆ ತೋಟದ ಮುಂಭಾಗ ಟಾರ್ ರಸ್ತೆಯಲ್ಲಿ ಮೇಕೇನಹಟ್ಟಿ ಗ್ರಾಮದ ಕಡೆಯಿಂದ ಆಡನೂರು ಕಡೆಗೆ ಬರುತ್ತಿದ್ದ ಕೆಎ-16-ಈಟಿ. 6926 ರ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿ ಅಪಘಾತವನ್ನುಂಟು ಮಾಡಿರುತ್ತೀರಿ. ಈ ಮೂಲಕ 1 ನೇ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ. ಸಂ. ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರಿ.

ಎರಡನೇಯದಾಗಿ ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 1 ನೇ ಆರೋಪಿತನಾದ ನೀವು ಮೇಲ್ಕಂಡ ವಾಹನವನ್ನು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ್ದರಿಂದ,ಮೋಟಾರ್ ಸೈಕಲ್ ಚಾಲಕ ರಂಗಸ್ವಾಮಿ ಬಿನ್ ರಾಜಪ್ಪ ಮತ್ತು ಸದರಿ ಬೈಕಿನ ಹಿಂಬದಿ ಕುಳಿತಿದ್ದ ತಿಮೇಶ ಬಿನ್ ಓಂಕಾರಪ್ಪ ಇಬ್ಬರೂ ಮೋಟಾರ್ ಸೈಕಲ್ ಸಮೇತ ಕೆಳಗೆ ಬಿದ್ದು, ಮೋಟಾರ್ ಸೈಕಲ್ ಜಖಂಗೊಂಡು ರಂಗಸ್ವಾಮಿ ಮತ್ತು ತಿಮ್ಮೇಶ ಇಬ್ಬರಿಗೂ ಸಹ ತಲೆಗೆ ಮುಖಕ್ಕೆ ಮತ್ತು ಇತರೆ ಕಡೆ ಬಲವಾದ ಪೆಟ್ಟು ಬಿದ್ದು ತೀವ್ರವಾಗಿ ರಕ್ತಗಾಯಗೊಂಡು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಈ ಮೂಲಕ 1 ನೇ ಆರೋಪಿತನಾದ ನೀವು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ.ಸಂ.ಕಲಂ 304(ಎ)ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಮೂರನೇಯದಾಗಿ ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 1 ನೇ ಆರೋಪಿತನಾದ ನೀನು ಅಪಘಾತ ಪಡಿಸಿದ ನಂತರ ಅಪಘಾತಕ್ಕೀಡಾದವರನ್ನು ಉಪಚರಿಸದೆ, ಹತ್ತಿರದ ಪೋಲೀಸ್ ಠಾಣೆಗೆ ಮಾಹಿತಿ ತಿಳಿಸದೇ ಸದರಿ ಟ್ರ್ಯಾಕ್ಟರ್ ಮತ್ತು ಟ್ರೈಲರ್ ನ್ನು ಸ್ಥಳದಲ್ಲಿ ನಿಲ್ಲಿಸದೇ ತೆಗೆದುಕೊಂಡು ಹೋಗಿರುತ್ತೀರಿ. ಈ ಮೂಲಕ 1 ನೇ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾರತೀಯ ಮೋಟರ್ ವಾಹನ ಕಾಯಿದೆ ಕಲಂ 187 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ನಾಲ್ಕಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 1 ನೇ ಆರೋಪಿತನಾದ ನೀನು ಚಾಲನ ಪರವಾನಿಗೆ ಇಲ್ಲದೇ ಕೆಎ-16-ಟಿಎ-2884 ಟ್ರ್ಯಾಕ್ಟರ್ ಮತ್ತು ನಂಬರ್ ಬರೆಸಿರದ ಚಾಸಿಸ್ ನಂಃ ವಿಟಿ/ಸಿಹೆಚ್ 322 ರ ಟ್ರ್ಯಾಕ್ಟರ್ ಟ್ರೈಲರ್ ಚಾಲನೆ ಮಾಡಿ ಅಪಪಘಾತವನ್ನುಂಟು ಮಾಡಿರುತ್ತೀರಿ. ಈ ಮೂಲಕ 1 ನೇ ಆರೋಪಿತನಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ

ಭಾರತೀಯ ಮೋಟರ್ ವಾಹನ ಕಾಯಿದೆ ಕಲಂ 3 ಸಹವಾಚಕ ಕಲಂ 181 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಐದನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿತನಾದ ನೀನು 1 ನೇ ಆರೋಪಿತನಿಗೆ ಚಾಲನ ಪರವಾನಿಗೆ ಇರುವುದಿಲ್ಲವೆಂದು ಗೊತ್ತಿದ್ದರೂ ಸಹ ಕೆಎ-16-ಟಿಎ-2884 ಟ್ರ್ಯಾಕ್ಟರ್ ಮತ್ತು ನಂಬರ್ ಬರೆಸಿರದ ಚಾಸಿಸ್ ನಂಃ ವಿಟಿ/ಸಿಹೆಚ್ 322 ರ ಟ್ಯಾಕ್ಟರ್ ಟ್ರೈಲರ್ ಚಾಲನೆ ಮಾಡಲು ಕೊಟ್ಟಿರುತ್ತೀರಿ. ಈ ಮೂಲಕ 2 ನೇ ಆರೋಪಿತನಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾರತೀಯ ಮೋಟರ್ ವಾಹನ ಕಾಯಿದೆ ಕಲಂ 5 ಸಹವಾಚಕ ಕಲಂ 180 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಕೊನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿತನಾದ ನೀನು ವಿಮೆ ಮಾಡಿಸದೇ ಕೆಎ-16-ಟಿಎ-2884 ಟ್ರ್ಯಾಕ್ಟರ್ ಮತ್ತು ನಂಬರ್ ಬರೆಸಿರದ ಚಾಸಿಸ್ ನಂಃ ವಿಟಿ/ಸಿಹೆಚ್ 322 ರ ಟ್ಯಾಕ್ಟರ್ ಟ್ರೈಲರ್ ನ್ನು 1 ನೇ ಆರೋಪಿತನಿಗೆ ಚಾಲನೆ ಮಾಡಲು ಕೊಟ್ಟು ಅಪಪಘಾತವನ್ನುಂಟು ಮಾಡಿರುತ್ತೀರಿ. ಈ ಮೂಲಕ 2 ನೇ ಆರೋಪಿತನಾದ ನೀನು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾರತೀಯ ಮೋಟರ್ ವಾಹನ ಕಾಯಿದೆ ಕಲಂ 146 ಸಹವಾಚಕ ಕಲಂ 196 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿರುತ್ತದೆ.

ಪ್ರಶ್ನೆ-1. ನಿಮಗೆ ಮೇಲಿನ ಅಪಾದನೆಯ ಸಾರಾಂಶ ತಿಳಿಯಿತೇ ?

ಉತ್ತರಃ -

ಪ್ರಶ್ನೆ-2. ಮೇಲಿನ ಆಪಾದನೆಯನ್ನು ಒಪ್ಪುವಿರಾ ? ಪ್ರತಿರಕ್ಷೆ ಇದೆಯಾ ?

ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ನಂತರ ಅವರು ನೀಡಿದ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

ದಿಃ26-12-2024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ ಹೊಳಲ್ಕೆರೆ